**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**

**ಓ ಎಸ್ ನಂ. 44/2019 ಪಿ. ಡಬ್ಲು: 1**

**ದಿನಾಂಕ: 05.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀಮತಿ. ಪಿ ಎಂ ಪಿ ವಕೀಲರಿಂದ:**

ನಾನು ಗೊಬ್ಬರದ ವ್ಯಾಪಾರ ಮಾಡುತ್ತೇನೆ. ನನಗೆ 1 ನೇ ಪ್ರತಿವಾದಿ 2016 ರಿಂದ ಪರಿಚಯ. 1 ನೇ ಪ್ರತಿವಾದಿ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಕೆ ಜಿ ಬಿ ಬ್ಯಾಂಕ್ ನಲ್ಲಿ 40,000/- ಮತ್ತು ಪಿ ಎಲ್ ಡಿ ಬ್ಯಾಂಕಿನಲ್ಲಿ 20 ರಿಂದ 25,000/- ಸಾಲ ಇತ್ತು. ಸದರಿ ಸಾಲಗಳು ಇರುವ ಬಗ್ಗೆ ನಾನು ಪಹಣಿಗಳನ್ನು ಹಾಜರುಪಡಿಸಿದ್ದೇನೆ. 1 ನೇ ಪ್ರತಿವಾದಿ ಸದರಿ ಬ್ಯಾಂಕಿನಲ್ಲಿ ದಾವಾಸ್ವತ್ತಿನ ಮೇಲೆ ಸಾಲ ಪಡಿದಿರುತ್ತಾರೆ ಎಂದರೆ ಸರಿ. ದಾವಾಸ್ವತ್ತು ಹೊಸಕೆರೆ ಗ್ರಾಮದ ಸ.ನಂ.18/1 ಒಂದು ಎಕರೆ 20 ಗುಂಟೆ. ಅದರ ಸ.ನಂ.18/1 ಅಥವಾ 20/1 ಇರಬಹುದು ಎನ್ನುತ್ತಾರೆ. ಸದರಿ ಜಮೀನನ್ನು ನಾನು ನೋಡಿರುತ್ತೇನೆ ಅದರಲ್ಲಿ ಅಡಿಕೆ ಮತ್ತು ತೆಂಗು ಬೆಳೆ ಇರುತ್ತದೆ. 1 ನೇ ಪ್ರತಿವಾದಿ ಸದರಿ ಜಮೀನಿನಲ್ಲಿ ದಾಳಿಂಬೆ ಬೆಳೆಯುತಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಅವರ ದಾಳಿಂಬೆ ಬೆಳೆಯನ್ನು ಬೆಳೆಯಲು ನನ್ನ ಗೊಬ್ಬರದ ಅಂಗಡಿಯಿಂದ ಗೊಬ್ಬರ ಖರೀದಿ ಮಾಡುತ್ತಿದ್ದರು ಎಂದರೆ ಸರಿ. ಅದೇ ರೀತಿ 1 ನೇ ಪ್ರತಿವಾದಿ ನನ್ನಿಂದ ಸಾಲ ಪಡಿಯುತ್ತಿದ್ದರು ಮತ್ತು ಅದನ್ನು ಕಾಲ ಕಾಲಕ್ಕೆ ಮರುಪಾವತಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಸಾಲವನ್ನು ನೀಡಲು ನಾನು ಜಮೀನನ್ನು ಆಧಾರವಾಗಿ ಬರೆದುಕೊಡಲು ಕೇಳಿದ ಮೇರೆಗೆ 1 ನೇ ಪ್ರತಿವಾದಿ ಬರೆದುಕೊಟ್ಟಿರುತ್ತಾರೆ ಎಂದರೆ ಸುಳ್ಳು.

1 ನೇ ಪ್ರತಿವಾದಿ ಬೆಂಗಳೂರಿನಲ್ಲಿರುವ ಅವರ ತಂಗಿಯ ಅಂಗಡಿಗಾಗಿ ಸಹ ನನ್ನಿಂದ ಸಾಲ ಪಡೆದಿದ್ದರು ಎಂದರೆ ಸುಳ್ಳು. ನಾನು ತಿಂಗಳಿಗೆ 2% ಬಡ್ಡಿಯಂತೆ 1 ನೇ ಪ್ರತಿವಾದಿಗೆ ಸಾಲ ನೀಡಿರುತ್ತೇನೆ ಎಂದರೆ ಸುಳ್ಳು. 1 ನೇ ಪ್ರತಿವಾದಿ ನನ್ನಿಂದ ಪಡೆದ ಸಾಲಗಳ ಬಾಬ್ತು ದಾವಾಸ್ವತ್ತನ್ನು ಆಧಾರವಾಗಿ ಬರೆದುಕೊಟ್ಟಿರುತ್ತಾರೆ ಮತ್ತು ಅವರಿಗೆ ಸದರಿ ಜಮೀನನ್ನು ಮಾರಾಟ ಮಾಡುವ ಯಾವುದೇ ಉದ್ದೇಶ ಇರಲಿಲ್ಲ ಎಂದರೆ ಸುಳ್ಳು. ಸದರಿ ಸಾಲದ ಬಾಬ್ತು 1 ನೇ ಪ್ರತಿವಾದಿ 3 ವರ್ಷಗಳ ಕಾಲ ತಿಂಗಳಿಗೆ 2% ಬಡ್ಡಿಯನ್ನು ನನಗೆ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯೆ ನನ್ನ ಹತ್ತಿರ ಬಂದು ದಾವಾಸ್ವತ್ತನ್ನು ಮಾರಾಟ ಮಾಡಲು ನಿರ್ಧರಿಸಿದ್ದೇನೆ ಎಂದು ಹೇಳಿದರು. 1 ನೇ ಪ್ರತಿವಾದಿ ಸದರಿ ವಿಚಾರವನ್ನು ಕ್ರಯದ ಕರಾರನ್ನು ಮಾಡಿಕೊಂಡ ದಿನದಿಂದ ಸುಮಾರು 3 ರಿಂದ 4 ದಿನದ ಹಿಂದೆ ನನಗೆ ಹೇಳಿದರು. ದಾವಾಸ್ವತ್ತನ್ನು ಮಾರಾಟ ಮಾಡುವ ಬಗ್ಗೆ ನಡೆದ ಮಾತುಕತೆಯಲ್ಲಿ ಸಿದ್ದರಾಮಯ್ಯ ಮತ್ತು ಹೊನ್ನಪ್ಪ ಎಂಬುವವರು ಇದ್ದರು. ಸದರಿ ವಿಚಾರಗಳ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ.1 ಕ್ರಯದ ಕರಾರು ಪತ್ರವನ್ನು ನಾನೇ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಹೊಸಕೆರೆ ಗ್ರಾಮದಲ್ಲಿ 1 ಗುಂಟೆಗೆ 6 ರಿಂದ 7 ಲಕ್ಷ ಬೆಲೆ ಇದೆ ಎಂದರೆ ಸಾಕ್ಷಿ ಈಗ ಇರಬಹುದು, 2016 ರಲ್ಲಿ 1 ಗುಂಟೆಗೆ ಸುಮಾರು 3,000/- ಬೆಲೆ ಇತ್ತು ಎನ್ನುತ್ತಾರೆ. ಸದರಿ ವಿಚಾರದ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ.1 ಅನ್ನು ಬರೆಯಲು ಸ್ಟಾಂಪ್ ಪತ್ರವನ್ನು 1 ನೇ ಪ್ರತಿವಾದಿಯೇ ತಂದಿರುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**